ಈ) ಇನ್ನು ಯಾವಾಗ ಬಾಕಿ ವಿಫಲವಾದ ಬಾವಿಗಳಿಗೆ ಸಹಾಯಧನ ಬಿಡುಗಡೆ ಮಾಡಿ ರೈತರನ್ನು ಋಣ ಮುಕ್ತರನ್ನಾಗಿ ಮಾಡುತ್ತೀರಿ.

ಉ) ಋಣ ಮುಕ್ತರಾಗದ ಉಳಿದ ರೈತರ ಬವಣೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ?

ಶ್ರೀ ಡಿ.ಕೆ. ಶಿವಕುಮಾರ್ (ಸರ್ಕಾರ ಸಚಿವರು) :

ಅ)

ತಾಲ್ಲೂಕು	ವಿಫಲಬಾವಿಗಳ ಸಂಖ್ಯೆ
ಬಿಜಾಪುರ	461
ಬಸವನ ಬಾಗೇವಾಡಿ	319
ಮುದ್ದೇಬಿಹಾಳ	405
ಇಂಡಿ	479
ಸಿಂಧಗಿ	665

(ರಾಷ್ಟ್ರೀಕೃತ ಬ್ಯಾಂಕುಗಳ ಮಾಹಿತಿ ಮಾತ್ರ 95-96 ರಿಂದ ನೀಡಲಾಗಿದೆ).

ಆ) ಇ) 1182 ಮೊತ್ತ ರೂ. 156.54 ಲಕ್ಷ (ರಾಷ್ಟ್ರೀಕೃತ ಬ್ಯಾಂಕುಗಳ ಮಾಹಿತಿ 95-96 ರಿಂದ ನೀಡಲಾಗಿದೆ).

ಬಿಜಾಪುರ	267	80.90
ಬಸವನಬಾಗೇವಾಡಿ	107	25.27
ಮುದ್ದೇಬಿಹಾಳ	44	5.05
ಇಂಡಿ	280	41.30
ಸಿಂಧಗಿ	382	70.31

ಈ) ಆದಷ್ಟು ಬೇಗನೆ ಸಹಾಯಧನ ಬಿಡುಗಡೆ ಮಾಡಲಾಗುವುದು.

ಉ) ಪರಿಗಣಿಸಿದೆ.

ವೃದ್ಧಾಶ್ರಮ ಯೋಜನೆಯಲ್ಲಿ ಮಂಜೂರಾದ ಕೇಂದ್ರಗಳ ಸಂಖ್ಯೆ

452 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೃದ್ಧಾಶ್ರಮ ಯೋಜನೆಯಡಿ ಸರ್ಕಾರದಿಂದ ಇದುವರೆವಿಗೆ ಮಂಜೂರಾಗಿರುವ ಕೇಂದ್ರಗಳ ಸಂಖ್ಯೆ ಎಷ್ಟು?

ಅ) ಇದುವರೆವಿಗೆ ಈ ಯೋಜನೆಗೆ ನೀಡಿರುವ ಹಣ ಎಷ್ಟು?

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಮಹಿಳಾ ಅಭಿವೃದ್ಧಿ ನಿಗಮದಿಂದ ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಖರ್ಚು ಮಾಡಿ ಜಾರಿಗೊಳಿಸಲಾಗುವುದು.

ಶ್ರೀಮತಿ. ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯವರು) :

ಅ) 17 ಕೇಂದ್ರಗಳಿಗೆ ಮಂಜೂರಾತಿ ನೀಡಿದೆ.

ಆ) ಈ ಯೋಜನೆಗೆ ಇದುವರೆಗೆ ರೂ.93,94,82-00ಗಳನ್ನು ನೀಡಲಾಗಿದೆ.

ಇ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಶಿವಮೊಗ್ಗ ಜಿಲ್ಲೆಯಲ್ಲಿ ಜಾರಿಗೊಳಿಸುತ್ತಿರುವ ಯೋಜನೆಗಳಿಗೆ ನಿಗದಿಪಡಿಸಿರುವ ಹಣ ಮತ್ತು ಫೆಬ್ರವರಿ ಅಂತ್ಯದವರೆಗೆ ಸಾಧಿಸಲಾದ ಪ್ರಗತಿ ಈ ಕೆಳಕಂಡಂತಿದೆ:

ಕ್ರ. ಸಂ	ಯೋಜನೆಯ ಹೆಸರು	ನಿಗದಿಪಡಿಸಿದ ಮೊತ್ತ	ಮಾಡಲಾದ ಖರ್ಚು (29-2-2000ದ ವರೆಗೆ)
(1)	ಮನೆಬೆಳಕು	4,86,116-00	3,76,400-00
(2)	ಉದ್ಯೋಗಿನಿ	1,25,000-00	97,500-00
(3)	ಮಹಿಳಾ ಉದ್ಯಮಿಗಳಿಗೆ ತರಬೇತಿ ಕಾರ್ಯಕ್ರಮ	1,43,000-00	54,000-00
(4)	ಮಾರುಕಟ್ಟೆ	40,000-00	30,000-00
(5)	ಇತರೆ ತರಬೇತಿ ಕಾರ್ಯಕ್ರಮ	1,12,200-00	55,300,00
(6)	ಹೈನುಗಾರಿಕೆ ಯೋಜನೆ	-	4,00,000-00
(7)	ಕಂಪ್ಯೂಟರ್ ತರಬೇತಿ ಕಾರ್ಯಕ್ರಮ	2,30,000-00	ಪ್ರಗತಿಯ ಹಂತದಲ್ಲಿದೆ.
(8)	ಸಂಯುಕ್ತ ಸಾಲ ಯೋಜನೆ	75,000-00	-

ನಾಡ ಕಛೇರಿಗಳನ್ನು ರದ್ದುಗೊಳಿಸುವ ವಿಚಾರ

454 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಅ) ನಾಡ ಕಛೇರಿಗಳನ್ನು ರದ್ದುಗೊಳಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೆ?

ಆ) ಪ್ರತಿಯೊಂದು ಸಣ್ಣ ಪುಟ್ಟ ಕೆಲಸಗಳಿಗೂ ರೈತರು ವೃತಾ ತಾಲ್ಲೂಕು ಕಛೇರಿಗೆ ಅಲೆಯುವುದನ್ನು ತಪ್ಪಿಸಲು ಪ್ರರಂಬವಾದ ಈ ವ್ಯವಸ್ಥೆಯನ್ನು ರದ್ದುಗೊಳಿಸಲು ಕಾರಣಗಳೇನು?